1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂಃ 493/2015

**ಚಾಸಾಃ( 01 ) ಪ್ರಾಸಾ ( 02 )**

**ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.**

**ದಿನಾಂಕಃ 09-02-2026.**

| | |
|---|---|
| ಸಾಕ್ಷಿದಾರರ ಹೆಸರು | ಸುನೀತಾ ಓಂಟಿಗೋಡಿ |
| ತಂದೆ ಹೆಸರು | ಹನಮಪ್ಪ |
| ವಯಸ್ಸು | 40 ವರ್ಷ |
| ಉದ್ಯೋಗ | ಗೃಹಣಿ |
| ವಾಸಸ್ಥಳ | ಧಾರವಾಡ |

**ಮುಖ್ಯ ವಿಚಾರಣೆಃ ಸಸಅ ರವರಿಂದ:**

2009 ನೇ ಸಾಲಿನಲ್ಲಿ ಕಾತರಕಿ-ಹದರಮಗ್ಗಿ ಗ್ರಾಮದ ನನ್ನ ದೊಡ್ಡಮ್ಮನ ಮನೆಯಲ್ಲಿ ನಾನು ವಾಸ ಇದ್ದು, ಶ್ರೀದೇವಿಯವರು ಪರಿಚಯವಾಗಿದ್ದು, ಶ್ರೀದೇವಿಯವರ ಅಣ್ಣನ ಹೆಸರು ಮಲ್ಲಿಕಾರ್ಜುನರವರ ಪರಿಚಯ ಅಗಿರುತ್ತದೆ. ಅಗ ನಾನು ಪಿ ಡಿ ಓ ರವರ ಹುದ್ದೆಗೆ ಅರ್ಜಿ ಸಲ್ಲಿಸಿದ್ದೇನು. ಅಗ ನನಗೆ ಅನ್ನಪೂರ್ಣ ಬಿ ಡಿ, ಅಂಗನವಾಡಿ ಸೂಪರವೈಜರ್, ಸುಬಾಷ್ ಪುರಾಣಿಕರವರನ್ನು ಪರಿಚಯಿಸಿರುತ್ತಾರೆ, ನಂತರ ಅವರು ನನಗೆ ಪಿ ಡಿ ಓಹುದ್ದೆಯನ್ನು ಕೊಡಿಸುತ್ತೇನೆ ಎಂದು ಹೇಳಿ, ಅನ್ನಪೂರ್ಣ ಉಪ್ಪಿನ್ ರವರ ಖಾತೆ ನಂ. 64019943904 ರ ಖಾತೆಗೆ ಒಟ್ಟು ರೂ. 3,34,000/- ಹಣವನ್ನು ವರ್ಗಾಯಿಸಿರುತ್ತೇನೆ. 2009 ರ 7, 8, 10, 11, ಜನವರಿ 2010 ರವರೆಗೆ ಹಣ ವರ್ಗಾಯಿಸಿರುತ್ತೇನ. ಅನ್ನಪೂರ್ಣ ಬಿ ಡಿ ರವರ ಖಾತೆ ಸಂಖ್ಯೆ ಗೊತ್ತಿರುವುದಿಲ್ಲ ಅದರೇ ಅವರ ಖಾತೆಗೆ ಒಂದು ಲಕ್ಷರೂ. ಹಣವನ್ನು ವರ್ಗಾಹಿಯಿಸಿರುತ್ತೇನೆ.

ನಂತರ ಸೆಪ್ಟಂಬರ್ 20090 ರಲ್ಲಿ ಪಿ ಡಿ ಓ ಮೊದಲನೇ ನೇಮಕಾತಿ ಪಟ್ಟಿ ಬಿಡುಗಡೆಯಾಗಿದ್ದು ಅದರಲ್ಲಿ ನನ್ನ ಹೆಸರು ಇರಲಿಲ್ಲ. ನಂತರ ನಾನು ಮಲ್ಲಿಕಾರ್ಜನ, ಸುಬಾಷ್, ಅನ್ನಪೂರ್ಣ ಪುರಾಣಿಕ ಮತ್ತು ಶ್ರಿದೇವಿರವರ ಬಳಿ ವಿಚಾರಿಸಲಾಗಿ ಅವರು 2 ನೇ ಪಟ್ಟಿಯಎಲ್ಲಿ ನಿನ್ನ ಹೆಸರು ಬರುವುದಾಗಿ ಹೇಳಿದ್ದರು. ನಂತರ ನನನ್ನು ಹರಪನಹಳ್ಳಿಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಸಭೆ ಸೇರಿಸಿದ್ದರು. ಅಲ್ಲಿ ಕರಿಬಸಪ್ಪ ತಂದೆ ಮಲ್ಲಪ್ಪ ಮತ್ತು ನನ್ನಂತೆ ಹಣ ನೀಡಿದವರು ಸಾಕಷ್ಟು ಜನರು ಸೇರಿದ್ದರು. ಕರಿಬಸಪ್ಪರವರು ನನ್ನ ತಂದೆಗೆ ಪರಿಚಯ ಇದ್ದ ಕಾರಣ ಅವರು ಕೆಲಸ ಅಗುತ್ತದೆ ಮಲ್ಲಿಕಾರ್ಜುನ ಪುರಾಣಿಕ ಮತ್ತು ಅನ್ನಪೂರ್ಣರವರನ್ನು ನಂಬಿ ನಿಮ್ಮ ಕೆಲಸ ಅಗುತ್ತದೆ ಎಂದು ತಿಳಿಸಿದ್ದರು. ಅನ್ನಪೂರ್ಣ ಬಿ ಡಿ ರವರ ತಂದೆ ಹಾಗೂ ಶ್ರಿದೇವಿರವರ ಅಜ್ಜನಾದ ವೆಂಕಟನಗೌಡ ರವರ ಬಳಿ ಕರೆದುಕೊಂಡು ಹೋಗಿದ್ದರು, ಅವರು ಸಹ ಮೊಮ್ಮಗಳು ಶ್ರಿದೇವಿ ಹಾಗೂ ಮಲ್ಲಿಕಾರ್ಜುನ ಹಾಗೂ ಅನ್ನಪೂರ್ಣ ಬಿ ಡಿ, ಅಳಿಯ ಸುಬಾಷ್ ಪುರಾಣಿಕರವರು ಭರವಸೆ ನೀಡಿದ್ದರು.

ಅಲ್ಲಿಯೇ ನಾನು ಮಲ್ಲಿಕಾರ್ಜುನವರಿಗೆ 1 ಲಕ್ಷ ರೂ. ಹಣವನ್ನು ವೆಂಕನಗೌಡರ ಮನೆಯಲ್ಲಿ ನೀಡಿರುತ್ತೇನೆ. ನಂತರ ದಿಃ 13-02-2010 ರಂದು 2 ನೇ ಪಿ ಡಿ ಓ ನೇಮಕಾತಿ ಪಟ್ಟಿ ಬಿಡುಗಡೆಗೊಂಡಿರುತ್ತದೆ. ಅದರಲ್ಲಿ ನನ್ನ ಹೆಸರು ಕ್ರಮ ಸಂಖ್ಯೆಃ 13 ರಲ್ಲಿ ಇತ್ತು ಅದರ ಸದರಿ ನೇಮಕಾತಿಯ ಪಟ್ಟಿ ನಕಲಿ ಪಟ್ಟಿ ಎಂದು ನಂತರ ನನಗೆ ತಿಳಿದು ಬಂದಿರುತ್ತದೆ. ಸದರಿ ನೇಮಕಾತಿಯ ಪಟ್ಟಿಯನ್ನು ಮಲ್ಲಿಕಾರ್ಜುನ ಮತ್ತು ಸುಭಾಷ್ ಪುರಾಣಿಕರವರು ನೀಡಿದ್ದರು. ನಂತರ ಈ ಬಗ್ಗೆ ನಾನು ಅನ್ನಪೂರ್ಣ ಉಪ್ಪಿನ್ ರವರ ಬಳಿ ವಿಚಾರಿಸಲಾಗಿ ತನ್ನ ಖಾತೆಗೆ ವರ್ಗಾವಣೆಯಾದ ಹಣವನ್ನು ಸುಭಾಷ್ ಪುರಾಣಿಕರವರಿಗೆ ನೀಡಿರುತ್ತೇನೆ ಆದರೆ ಹಣವನ್ನು ಯಾವ ಕಾರಣಕ್ಕಾಗಿ ನೀಡಿರುತ್ತಿರಿ ಎಂದು ನನಗೆ ಗೊತ್ತಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನಾನು ಮತ್ತು ನನ್ನ ತಂದೆ, ನನ್ನ ರೀತಿ ಹಣ ನೀಡಿದ 8-10 ಜನರನ್ನು ಕರೆದುಕೊಂಡು ಹೋಗಿ ಶ್ರಿದೇವಿ, ಮಲ್ಲಿಕಾರ್ಜುನ, ಸುಭಾಷ್, ಅನ್ನಪೂರ್ಣರವರ ಬಳಿ ವಿಚಾರಿಸಲಾಗಿ ಮಲ್ಲಿಕಾರ್ಜುನ ಮತ್ತು ಸುಬಾಷರವರು ಹಣವನ್ನು ಪಡೆದುಕೊಂಡಿರುವುದು ನಿಜವಿರುತ್ತದೆ ಎಂದು ಒಪ್ಪಿಕೊಂಡಿದ್ದು, ನಂತರ ನಮ್ಮ ಹಣವನ್ನು ನಾವು ಕೇಳಿದಾಗಿ ಶ್ರಿದೇವಿ, ಮಲ್ಲಿಕಾರ್ಜುನ, ಸುಭಾಷ್, ಅನ್ನಪೂರ್ಣ ಬಿ ಡಿ ಇವರುಗಳು ನಮಗೆ ಜೀವ ಬೇದರಿಕೆ ಹಾಕಿರುತ್ತಾರೆ.

ನಂತರ ನಾನು ಈ ವಿಷಯದ ಕುರಿತು ದಿಃ 24-02-2011 ರಂದು ದೂರನ್ನು ದಾಖಲಿಸಿರುತ್ತೇನೆ. ಸಾಕ್ಷಿಯು ತಾನು ಸಲ್ಲಿಸಿದ ದೃಢೀಕೃತ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ನಂತರ ಈ ಬಗ್ಗೆ ದಿಃ 12-11-2013 ರಂದು ಚಾಸಾ 5 ಮತ್ತು 6 ರವರ ಸಮಕ್ಷಮ ಬೆ. 9.00 ರಿಂದ 10.00 ಗಂಟೆಯ ಅವಧಿಯಲ್ಲಿ ಪಂಚನಾಮೆಯನ್ನು ಮಾಡಿರುತ್ತಾರೆ.

ನನ್ನ ದೂರುನೊಂದಿಗೆ ಅನ್ನಪೂರ್ಣ ಉಪ್ಪಿನ್ ಮತ್ತು ಅನ್ನಪೂರ್ಣ ಬಿಡಿ ರವರಿಗೆ ಹಣ ನೀಡಿದ ಬಗ್ಗೆ ರಸೀದಿಗಳನ್ನು ತನಿಖಾಧಿಕಾರಿಗಳಿಗೆ ಹಾಜರು ಪಡಿಸಿರುತ್ತೇನೆ. ಸದರಿ ರಸೀದಿಗಳನ್ನು ನಿಪಿ 3 ರಿಂದ 13 ಎಂದು ಗುರುತಿಸಲಾಯಿತು. ಬ್ಯಾಂಕ್ ನ ರಸೀದಿಗಳು ಹಾಗೂ ಅಕೌಂಟ್ ಸ್ಟೇಟ್ ಮೆಂಟ್ ನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 14 ರಿಂದ 18 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಗಿದೆ.

(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

1 ನೇ ಹೆ. ಜೆ ಎಂ ಎಫ್ ಸಿ ಕೊಪ್ಪಳ.